



ಅರುಣ ಪಿ. ಭಟ್ಟ

## ವಾರಭವಿಷ್ಯ: 16.04.2026ರಿಂದ 22.04.2026ರವರೆಗೆ




ಉದ್ಯಮಿಗಳಿಗೆ ಉತ್ತಮ ಲಾಭವಿದೆ. ಹೊಸ ಉತ್ಸಾಹ ನಿಮ್ಮಲ್ಲಿ ಕಾಣಿಸಿಕೊಳ್ಳಲಿದೆ. ವಾರದ ಮಧ್ಯಭಾಗದಲ್ಲಿ ಜೀವನಮಟ್ಟದ ಸುಧಾರಣೆ ಬಗ್ಗೆ ಹೆಚ್ಚಿನ ಗಮನ ನೀಡಲಿದ್ದೀರಿ. ನಾನಾ ಬಗೆಯ ಸವಾಲುಗಳು ಎದುರಾಗಲಿವೆ. ಸಂತೋಷದ ಕ್ಷಣಗಳಲ್ಲಿ ಇವು ಅಡೆತಡೆಗಳಂತೆ ಅನಿಸುತ್ತವೆ. ಸಮಸ್ಯೆಗಳನ್ನು ಮುಂಚಿತವಾಗಿ ಊಹಿಸುವಲ್ಲಿ ಸಫಲರಾಗುತ್ತೀರಿ. ಶುಭದಿನ: 18. ಹನುಮಾನ್ ಚಾಲೀಸ್ ಪಠಿಸಿರಿ.




ಸಂಘಟನೆಗೆ ಸಂಬಂಧಿಸಿದಂತೆ ಉತ್ತಮ ಪ್ರಗತಿ ಇದೆ. ಉದ್ಯೋಗ ಸ್ಥಳದಲ್ಲಿ ಮೆಚ್ಚುಗೆ ಮಾತುಗಳನ್ನು ಕೇಳಲಿದ್ದೀರಿ. ಸಂಗಾತಿಯನ್ನು ಮೆಚ್ಚಿಸಲು ಉಡುಗೊರೆಗಳನ್ನು ನೀಡಲಿದ್ದೀರಿ. ನೀವು ನಂಬಿದ ವ್ಯಕ್ತಿಗಳು ವಿವಿಧ ವಿಚಾರಗಳಲ್ಲಿ ಸುಳ್ಳು ಹೇಳಿದ್ದಾರೆ ಎಂಬ ಸಂಗತಿ ತಿಳಿದು ಬೇಸರವಾಗುತ್ತದೆ. ಸಂಗಾತಿಯ ಸಲಹೆಯನ್ನು ಗಂಭೀರವಾಗಿ ಪರಿಗಣಿಸುವುದು ಉತ್ತಮ. ಶುಭದಿನ: 17. ಗಣೇಶ ಪಂಚರತ್ನ ಪಠಿಸಿರಿ.




ವೃತ್ತಿ ಬದುಕಿನಲ್ಲಿ ಬೆಳವಣಿಗೆಗೆ ಅದ್ಭುತ ಅವಕಾಶಗಳಿವೆ. ನಿಮ್ಮ ಪರಿಶ್ರಮಕ್ಕೆ ತುಂಬ ವೇಗದಲ್ಲಿ ಪ್ರತಿಫಲ ದೊರೆಯಲಿದೆ. ಹಣಕಾಸು ಪರಿಸ್ಥಿತಿ ಸುಧಾರಿಸಲು ಅವಕಾಶ ನಿಚ್ಚಳವಾಗಿ ಗೋಚರಿಸುತ್ತದೆ. ಈ ಅವಧಿಯಲ್ಲಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಲು ಮನಸ್ಸು ಮಾಡುತ್ತೀರಿ. ಖರ್ಚಿನ ಪ್ರಮಾಣ ಹೆಚ್ಚಾಗುತ್ತದೆ. ಆಹಾರದ ವಿಚಾರದಲ್ಲಿ ಶಿಸ್ತು ಪಾಲಿಸಲಿದ್ದೀರಿ. ಶುಭದಿನ: 19. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಉದ್ಯೋಗಸ್ಥರಿಗೆ ಅನುಕೂಲವಿದೆ. ಸೇವಾ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಉತ್ತಮ ಅನುಕೂಲವಿದೆ. ಸಂಬಂಧದಲ್ಲಿ ಕಹಿ ಅನುಭವದಿಂದ ಬೇಸರವಾಗಲಿದೆ. ಇಂಥ ಸನ್ನಿವೇಶದಲ್ಲಿ ವಾಗ್ವಾದ ಮಾಡದೆ ವಾಸ್ತವವನ್ನು ವಿವರಿಸಿ. ಹಣಕಾಸು ವಿಚಾರದಲ್ಲಿ ವಿಶೇಷವಾದ ಪ್ರಗತಿ ಇಲ್ಲ. ಕೆಲಸವೊಂದನ್ನು ಪೂರ್ಣಗೊಳಿಸಲು ಸಮಯ ಮೀಸಲಿಡಲಿದ್ದೀರಿ. ಶುಭದಿನ: 18. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಉದ್ಯೋಗದಲ್ಲಿ ಪ್ರಗತಿಗಾಗಿ ಭಾರೀ ಶ್ರಮ ಹಾಕಲಿದ್ದೀರಿ. ಒಂದಲ್ಲ ಒಂದು ಒತ್ತಡ ಇದ್ದೇ ಇರುತ್ತದೆ. ನಿಮ್ಮ ಪರಿಶ್ರಮವನ್ನು ಮುಂದುವರಿಸಿದಲ್ಲಿ ಭವಿಷ್ಯದಲ್ಲಿ ಅನುಕೂಲ ನಿರೀಕ್ಷಿಸಲು ಸಾಧ್ಯ. ಕೆಲವು ಕಾನೂನು ತೊಡಕುಗಳನ್ನು ಎದುರಿಸಬೇಕಾಗುತ್ತದೆ. ದೂರದ ಪ್ರಯಾಣ ಮಾಡಲು ನಿರ್ಧಾರ ಮಾಡುತ್ತೀರಿ. ಮಕ್ಕಳ ಕೆಲ ಹವ್ಯಾಸದಿಂದ ಬೇಸರವಾಗುತ್ತದೆ. ಶುಭದಿನ: 20. ಕಾಲಭೈರವನ ಸೇವೆ ಮಾಡಿರಿ.




ನಿಮ್ಮ ಶ್ರಮಕ್ಕೆ ಅದ್ಭುತವಾದ ಅನುಕೂಲಗಳು ದೊರೆಯಲಿವೆ. ಪೋಷಕರ ಜತೆಗೆ ಹೆಚ್ಚು ಸಮಯ ಕಳೆಯಲು ಸಾಧ್ಯವಾಗದೆ ಸಮಸ್ಯೆಗಳು ತಲೆದೋರಲಿವೆ. ಹೊಸ ಉದ್ಯೋಗಕ್ಕೆ ಇನ್ನೂ ಹೆಚ್ಚಿನ ಶ್ರಮ ಹಾಕಬೇಕು. ವಾರದ ದ್ವಿತೀಯಾರ್ಧದಲ್ಲಿ ವ್ಯಾಪಾರ ವ್ಯವಹಾರದಲ್ಲಿ ಉತ್ತಮ ಲಾಭ ಇದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿ ಇದೆ. ಮನಸ್ತಾಪಗಳು ಉದ್ಭವಿಸಬಹುದು. ಶುಭದಿನ: 21. ಸೌಂದರ್ಯ ಲಹರಿ ಪಠಿಸಿರಿ.




ನಿಮ್ಮ ಶ್ರಮಕ್ಕೆ ಯಶಸ್ಸು ಸಿಗಲಿದೆ. ಉದ್ಯೋಗದಲ್ಲಿ ನಿರೀಕ್ಷಿತ ಯಶಸ್ಸು ದೊರೆಯಲಿದೆ. ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಹೆಚ್ಚಿನ ಪರಿಶ್ರಮ ಹಾಕಬೇಕಾಗುತ್ತದೆ. ಯಶಸ್ಸು ದೊರೆಯುವ ಸಾಧ್ಯತೆ ಹೆಚ್ಚಿದೆ. ನಾನಾ ಕಡೆಯಿಂದ ಸಮಸ್ಯೆಗಳು ಎದುರಾಗುತ್ತವೆ. ಇದರಿಂದ ಮಾನಸಿಕ ಕ್ಷೋಭೆಗೆ ಗುರಿಯಾಗುತ್ತೀರಿ. ಇನ್ನು ಹಣಕಾಸಿನ ಖರ್ಚು ವಿಪರೀತವಾಗುತ್ತದೆ. ಶುಭದಿನ: 19. ಲಿಂಗಾಷ್ಟಕ ಪಠಿಸಿರಿ.




ಹೆಚ್ಚುವರಿ ಆದಾಯ ನಿರೀಕ್ಷಿತ ಪ್ರಮಾಣದಲ್ಲಿ ಸಿಗಲಿಲ್ಲ ಎಂಬ ಬೇಸರ. ಒತ್ತಡದ ಸನ್ನಿವೇಶವನ್ನು ಎದುರಿಸುತ್ತೀರಿ. ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಸರಿಯಾದ ಚಿಕಿತ್ಸೆಯನ್ನು ಪಡೆಯುವುದು ಉತ್ತಮ. ವಾರದ ಮಧ್ಯಭಾಗಕ್ಕೆ ಬರುತ್ತಾ ಲಾಭದ ಪ್ರಮಾಣದಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆಯಾಗುತ್ತದೆ. ಹಣಕಾಸು ವಿಚಾರದಲ್ಲಿ ಮತ್ತೆ ಹಳೆ ಲಯಕ್ಕೆ ಮರಳುತ್ತೀರಿ. ಶುಭದಿನ: 17. ಚಂಡಿ ಪಾರಾಯಣ ಮಾಡಿರಿ.




ಶೈಕ್ಷಣಿಕ ರಂಗದಲ್ಲಿ ಅದ್ಭುತವಾದ ಪ್ರಗತಿ ಇದೆ. ಸಂಗಾತಿ ಜತೆಗೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಹಣಕಾಸು ವಿಚಾರದಲ್ಲಿ ನಿರೀಕ್ಷಿತವಾದ ಪ್ರಗತಿ ಆಗಲಿದೆ. ಕೆಲವರಿಗೆ ಖರ್ಚಿನಲ್ಲಿ ಅನಿರೀಕ್ಷಿತವಾದ ಹೆಚ್ಚಳ ಆಗಬಹುದು. ಹಣಕಾಸು ಹೂಡಿಕೆ ವ್ಯವಹಾರದಲ್ಲಿ ಉತ್ತಮವಾದ ಪ್ರಗತಿ ಇದೆ. ನಿಮ್ಮನ್ನು ಮಣಿಸಲು ವಿರೋಧಿ ಪಾಳಯದಿಂದ ನಾನಾ ಬಗೆಯ ಪ್ರಯತ್ನಗಳು ಆಗುತ್ತವೆ. ಶುಭದಿನ: 21. ದತ್ತ ಗುರುಚರಿತ್ರೆ ಪಠಿಸಿರಿ.




ಈಗಿರುವ ಗ್ರಹಗತಿಗಳನ್ನು ಗಮನಿಸಿದರೆ ಸಂಸ್ಥೆಯೊಂದರ ಜತೆಗೆ ದೀರ್ಘಾವಧಿ ಒಪ್ಪಂದಕ್ಕೆ ಬರುವ ಸಾಧ್ಯತೆಗಳಿವೆ. ಉದ್ಯಮವನ್ನು ವಿಸ್ತರಿಸಲು ವಿಶಿಷ್ಟ ಅವಕಾಶಗಳು ದೊರೆಯಬಹುದು. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮವಾದ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳು ಇದ್ದಲ್ಲಿ ಅವುಗಳನ್ನು ನಿವಾರಿಸಿಕೊಳ್ಳಲು ಸೂಕ್ತ ಸಮಯ. ಹಣಕಾಸು ಅಗತ್ಯ ಹೆಚ್ಚಾಗಲಿದೆ. ಶುಭದಿನ: 18. ನವಗ್ರಹ ಆರಾಧನೆ ಮಾಡಿರಿ.




ವಾರದ ಶುರುವಿನಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ಉತ್ಸಾಹ ಹೆಚ್ಚಾಗಲಿದೆ. ಅಸ್ತವ್ಯಸ್ತವಾಗಿ ನಿಂತುಹೋಗಿದ್ದ ಕೆಲಸ ಕಾರ್ಯಗಳನ್ನು ಗಡುವಿನೊಳಗೆ ಪೂರ್ಣಗೊಳಿಸಲಿದ್ದೀರಿ. ಸಂಬಂಧದೊಳಗೆ ಸಮಸ್ಯೆಗಳಿಗೆ ಹೆಚ್ಚಾಗಲಿವೆ. ಸೋದರ ಸೋದರಿ ಜತೆಗಿನ ಬಾಂಧವ್ಯ ಗಟ್ಟಿಯಾಗಲಿದೆ. ಉದ್ಯೋಗಸ್ಥರಿಗೆ ನಾನಾ ಬಗೆಯಲ್ಲಿ ಅನುಕೂಲಗಳಿವೆ. ಶುಭದಿನ: 21. ವಿಷ್ಣು ಸಹಸ್ರನಾಮ ಮಾಡಿರಿ.




ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗುವ ಸಾಧ್ಯತೆ. ಉದ್ಯೋಗ ವಿಚಾರವಾಗಿ ದೂರಪ್ರಯಾಣ ಮಾಡಬೇಕಾಗುತ್ತದೆ. ಇದರಿಂದ ಮಾನಸಿಕವಾಗಿ ಚಿಂತೆಗೆ ಗುರಿಯಾಗುತ್ತೀರಿ. ಆರೋಗ್ಯದಲ್ಲಿ ಸಮಸ್ಯೆ ಎದುರಾಗಬಹುದು. ಸಂಗಾತಿ ಜತೆಗೆ ಮನಸ್ತಾಪ ಏರ್ಪಡಬಹುದು. ವಾರದ ದ್ವಿತೀಯಾರ್ಧದಲ್ಲಿ ಉದ್ಯೋಗ ಸ್ಥಾನದಲ್ಲಿ ಅದ್ಭುತವಾದ ಪ್ರಗತಿ ಇದೆ. ಶುಭದಿನ: 20. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.